ಕರ್ನಾಟಕ ವಿಧಾನ ಸಭೆ

ಮಂಗಳಾವರ 27ನೇ ಜನವರಿ 1998ರಂದು ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಸ್.ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

(1) ಸಂತಾಪ ಸೂಚನೆ

ಅಧ್ಯಕ್ಷರು: ಮಾನ್ಯ ಸಚಿವರಾದ ಶ್ರೀ ಎಸ್.ಡಿ.ಜಯರಾಮ್, ಶಾಸಕರಾದ ಶ್ರೀ ಟಿ.ಮರುಳಸಿದ್ದನಗೌಡ, ಮಾಜಿ ಉಸ್ತುವಾರಿ ಪ್ರಧಾನಮಂತ್ರಿಗಳಾದ ಶ್ರೀ ಗುಲ್ಜಾರಿಲಾಲ್ ನಂದಾ, ಮಾಜಿ ಮಂತ್ರಿಗಳಾದ ಶ್ರೀ ಎಂ.ಎಸ್.ಶ್ರೀನಿವಾಸನ್ ಹಾಗೂ ಶ್ರೀ ವಿ.ವಿ.ಪತ್ತಾರ್, ಮಾಜಿ ಶಾಸಕರುಗಳಾದ ಶ್ರೀಮತಿ ಮೈಲಾರ ಸಿದ್ಧಮ್ಮ, ಶ್ರೀ ವಿ.ವಿ.ವಾಯ್, ಶ್ರೀ ಪುಟ್ಟಸ್ವಾಮಿಗೌಡ, ಶ್ರೀ ಬಸವಣ್ಣ, ಶ್ರೀ ವಿ.ಬಿ.ದೀನದಯಾಳ್ ನಾಯ್ಡು ಮತ್ತು ಸಾಹಿತಿಗಳಾದಂಥ ಶ್ರೀ ಶಿವರಾಮ್ ಕಾರಂತ, ಇವರುಗಳು ನಿಧನರಾದುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

ಗಣಿ ಮತ್ತು ಭೂ ವಿಜ್ಞಾನ ಸಚಿವರಾಗಿದ್ದ ಶ್ರೀ ಎಸ್.ಡಿ.ಜಯರಾಮ್ ಅವರು ಕಲಾ ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರು. ಮಂಡ್ಯ ಟೌನಿನಲ್ಲಿರುವ ವಿವೇಕಾನಂದ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಇವರು ಎಂಟನೇ ವಿಧಾನಸಭೆಗೆ ಹಾಗೂ ಹತ್ತನೇ ವಿಧಾನಸಭೆಗೆ ಮಂಡ್ಯ ಕ್ಷೇತ್ರದಿಂದ ಚುನಾಯಿತರಾಗಿ ಮಾನ್ಯ ಹೆಚ್.ಡಿ.ದೇವೇಗೌಡ ಸಚಿವ ಸಂಪುಟದಲ್ಲಿ ಮತ್ತು ಮಾನ್ಯ ಜೆ.ಹೆಚ್.ಪಟೇಲ್ ಅವರ ಸಚಿವ ಸಂಪುಟದಲ್ಲಿ ಗಣಿ ಮತ್ತು ಭೂ ವಿಜ್ಞಾನ ಸಚಿವರಾಗಿ ಸೇವೆ ಸಲ್ಲಿಸುತ್ತಿದ್ದರು. ಅವರು ಈ ದಿನ ಬೆಳಿಗ್ಗೆ ನಿಧನ ಹೊಂದಿರುತ್ತಾರೆ.

ಶಾಸಕರಾದ ಶ್ರೀ ಟಿ.ಮರುಳಸಿದ್ದನಗೌಡರು ದಿನಾಂಕ 25-4-1955 ರಂದು ಜನಿಸಿರುತ್ತಾರೆ. ಇವರು ಕಲಾ ಹಾಗೂ ಕಾನೂನು ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರು ಹಾಗೂ ಕೃಷಿಕರಾಗಿದ್ದರು. ಕರ್ನಾಟಕ ರಾಜ್ಯ ಬೀಜ ನಿಗಮ ಹಾಗೂ ಬೆಂಗಳೂರು ಮತ್ತು ಹೊಸಪೇಟೆಯ ಬಿ.ಡಿ.ಸಿ.ಸಿ. ಬ್ಯಾಂಕಿನ ನಿರ್ದೇಶಕರಾಗಿದ್ದರು. ಇವರು 1994ರಲ್ಲಿ ಹತ್ತನೇ ವಿಧಾನಸಭೆಗೆ ಕೊಟ್ಟೂರು ಕ್ಷೇತ್ರದಿಂದ ಚುನಾಯಿತರಾಗಿದ್ದರು. ಶ್ರೀಯುತರು ದಿನಾಂಕ:2-12-1997 ರಂದು ನಿಧನರಾದರು.

ಮಾಜಿ ಉಸ್ತುವಾರಿ ಪ್ರಧಾನಮಂತ್ರಿಳಾದ ಶ್ರೀ ಗುಲ್ಜಾರಿಲಾಲ್ ನಂದಾ ಇವರು ಮಹಾತ್ಮ ಗಾಂಧಿಯವರ ಅನುಯಾಯಿಗಳಾಗಿದ್ದು, ಅವರ ತತ್ವಗಳಲ್ಲಿ

ನಂಬಿಕೆಯಿಟ್ಟವರಾಗಿದ್ದರು. ಮುಂಬೈ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳಾದ ಬಾಳಾಸಾಹೇಬ್ ಖೇರ್‌ರವರ ಸಂಸದೀಯ ಕಾರ್ಯದರ್ಶಿಗಳಾಗಿ ರಾಜಕೀಯ ಪ್ರವೇಶ ಮಾಡಿರುತ್ತಾರೆ ಮತ್ತು ಲೇಬರ್ ಹಾಗೂ ಹೌಸಿಂಗ್ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಜವಹರ್‌ಲಾಲ್ ನೆಹರೂರವರು ಪ್ರಥಮ ಬಾರಿಗೆ ಇವರನ್ನು ಯೋಜನಾ ಆಯೋಗದ ಉಪಾಧ್ಯಕ್ಷರನ್ನಾಗಿ ನೇಮಿಸಿದ್ದರು. ರಾಷ್ಟ್ರದ ಮೊದಲ ಪಂಚವಾರ್ಷಿಕ ಯೋಜನೆಯನ್ನು ಇವರು ಪ್ರಾರಂಭಿಸಿದರು. ಪ್ರಧಾನಮಂತ್ರಿಗಳಾಗಿದ್ದ ಜವಹರ್‌ಲಾಲ್ ನೆಹರು, ಲಾಲ್ ಬಹುದ್ದೂರ್ ಶಾಸ್ತ್ರಿ ಹಾಗೂ ಶ್ರೀಮತಿ ಇಂದಿರಾಗಾಂಧಿಯವರ ಸಚಿವ ಸಂಪುಟದಲ್ಲಿ ವಿವಿಧ ಖಾತೆಯ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀ ನೆಹರು ಅವರು ನಿಧನರಾದ ನಂತರ ಹಾಗೂ ಶಾಸ್ತ್ರಿಯವರು ನಿಧನರಾದ ನಂತರ ಎರಡು ಬಾರಿ ಅಲ್ಪಾವಧಿ ಕಾಲ ಉಸ್ತುವಾರಿ ಪ್ರಧಾನಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದರು. ಇವರಿಗೆ ಕಳೆದ ವರ್ಷ ಭಾರತರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಶ್ರೀಯುತರು ದಿನಾಂಕ: 15-1-1998 ರಂದು ದೈವಾಧೀನರಾದರು.

ಮಾಜಿ ಸಚಿವರಾದ ಶ್ರೀ ಎಂ.ಎಸ್.ಶ್ರೀನಿವಾಸನ್, ಇವರು ಪದವೀಧರರಾಗಿದ್ದು, ಮೈಸೂರು ಸಿವಿಲ್ ಸರ್ವೀಸ್‌ಗೆ ಸೇರಿದ್ದು, ಸರ್ಕಾರದ ಪ್ರಮುಖ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸಿದ್ದರು. 1943-46ರ ಅವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆ, ಕೃಷಿ, ಆಹಾರ ಮತ್ತು ನಾಗರೀಕ ಸರಬರಾಜು ಖಾತೆಯ ಸಚಿವರಾಗಿ ನಂತರ ಗ್ವಾಲಿಯರ್ ಸಂಸ್ಥಾನದ ದಿವಾನರಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ದಿನಾಂಕ: 15-1-1998 ರಂದು ನಿಧನರಾದರು.

ಮಾಜಿ ಸಚಿವರಾದ ಶ್ರೀ ವಿ.ವಿ.ಪತ್ತಾರ್‌ರವರು ಕಾನೂನು ಪದವೀಧರರಾಗಿದ್ದು, ನ್ಯಾಯವಾದಿಯಾಗಿ ವೃತ್ತಿಯನ್ನು ಆರಂಭಿಸಿ ಬಿಜಾಪುರ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷರಾಗಿ, ರಷ್ಯಾ, ರೋಂ, ಮುಂತಾದ ದೇಶಗಳಿಗೆ ರಾಜ್ಯ ನಿಯೋಗದೊಂದಿಗೆ ಭೇಟಿ ನಿಡಿದ್ದರು. 1978ರ ವಿಧಾನಸಭೆಗೆ ಜಮಖಂಡಿಯಿಂದ ಸ್ಪರ್ಧಿಸಿ ಚುನಾಯಿತರಾಗಿದ್ದರು. ಇವರು ದಿನಾಂಕ: 4-11-1997ರಂದು ನಿಧನ ಹೊಂದಿರುತ್ತಾರೆ.

ಮಾಜಿ ಶಾಸಕರಾದ ಶ್ರೀಮತಿ ಮೈಲಾರ ಸಿದ್ದಮ್ಮನವರು ಗಾಂಧೀಜಿಯವರ ತತ್ವದಲ್ಲಿ ನಂಬಿಕೆಯುಳ್ಳವರಾಗಿದ್ದು, ಅವರ ಅನುಯಾಯಿಗಳಾಗಿದ್ದರು. ಗ್ರಾಮೀಣ ಕೈಗಾರಿಕೆ, ಸಾಮಾಜಿಕ ಚಟುವಟಿಕೆ ಹಾಗೂ ಬಡವರ ಏಳಿಗೆಗಾಗಿ ಶ್ರಮಿಸಿದ್ದಾರೆ. ಎರಡನೆ ಹಾಗೂ ಮೂರನೇ ಮೈಸೂರು ವಿಧಾನಸಭೆಗೆ ಹಾವೇರಿ ಕ್ಷೇತ್ರದಿಂದ ಚುನಾಯಿತರಾಗಿದ್ದರು. ಇವರು ದಿನಾಂಕ: 3-11-1997ರಂದು ನಿಧನರಾದರು.

ಶ್ರೀ ವಿ.ವಿ.ವಾಯಿ, ಮಾಜಿ ಶಾಸಕರು, ಧಾರವಾಡ ಜಿಲ್ಲಾ ಕಾಂಗ್ರೆಸ್ ಪಕ್ಷ ಹಾಗೂ ಸೇವಾದಳದ ಸಂಘಟಿಕರಾಗಿ ಮತ್ತು 1947ರ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ

ಭಾಗವಹಿಸಿದ್ದರು. ಇವರು 1972ರಲ್ಲಿ 5ನೇ ವಿಧಾನಸಭೆಗೆ ಶಿರಹಟ್ಟಿ ಕ್ಷೇತ್ರದಿಂದ ಸ್ಪರ್ಧಿಸಿ ಆಯ್ಕೆಯಾಗಿದ್ದರು. ಶ್ರೀಯುತರು ದಿನಾಂಕ: 10-12-1997ರಂದು ನಿಧನರಾದರು.

ಶ್ರೀ ಪುಟ್ಟಿಸ್ವಾಮಿಗೌಡರು ವೃತ್ತಿಯಲ್ಲಿ ಕೃಷಿಕರಾಗಿದ್ದು, ಸಮಾಜದ ಏಳಿಗೆಗಾಗಿ ಹಲವಾರು ಸಂಘ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿರುತ್ತಾರೆ. ಇವರು 1985ರಲ್ಲಿ 8ನೇ ವಿಧಾನ ಸಭೆಗೆ ರಾಮನಗರ ಕ್ಷೇತ್ರದಿಂದ ಸ್ಪರ್ಧಿಸಿ ಆಯ್ಕೆಯಾಗಿದ್ದರು. ಶ್ರೀಯುತರು ದಿನಾಂಕ: 13-12-1997ರಂದು ನಿಧನರಾದರು.

ಶ್ರೀ ಎನ್.ಹೆಚ್.ಬಸಣ್ಣ, ಇವರು ವೃತ್ತಿಯಲ್ಲಿ ಕೃಷಿಕರಾಗಿದ್ದು, 1942ರಿಂದ ಕಾಂಗ್ರೆಸ್ ಪಕ್ಷದ ಸದಸ್ಯರಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿರುತ್ತಾರೆ. ಇವರು ಮೂರನೇ ಹಾಗೂ ನಾಲ್ಕನೇ ವಿಧಾನಸಭೆಗೆ ಮೊಳಕಾಲ್ಮೂರು ಕ್ಷೇತ್ರದಿಂದ ಸ್ಪರ್ಧಿಸಿ ಚುನಾಯಿತರಾಗಿದ್ದರು. ಶ್ರೀಯುತರು ದಿನಾಂಕ: 14-12-1997ರಂದು ನಿಧನರಾದರು.

ಶ್ರೀ ವಿ.ಪಿ.ದೀನದಯಾಳ್ ನಾಯ್ಡುರವರು ಪದವೀಧರರಾಗಿದ್ದು ವೃತ್ತಿಯಲ್ಲಿ ನ್ಯಾಯವಾದಿಗಳಾಗಿದ್ದರು. ಉತ್ತಮ ಕ್ರೀಡಾಪಟುವಾಗಿದ್ದು ನಾಯ್ಡುರವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು. ಇವರು 1949-55ರ ಅವಧಿಯಲ್ಲಿ ಬೆಂಗಳೂರು ಕಾರ್ಪೊರೇಷನ್ ಉಪಮೇಯರ್ ಹಾಗೂ ಮೇಯರ್ ಆಗಿ ಸೇವೆ ಸಲ್ಲಿಸಿರುತ್ತಾರೆ. 1957ರಲ್ಲಿ ಕಬ್ಬನಪೇಟೆ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಚುನಾಯಿತರಾಗಿದ್ದರು. ಇವರು ದಿನಾಂಕ: 8-1-1998ರಂದು ನಿಧನರಾದರು.

ಶ್ರೀ ಶಿವರಾಮ್ ಕಾರಂತ್‌ರವರು ಕೋಟಾ, ಕುಂದಾಪುರ ಹಾಗೂ ಮಂಗಳೂರಿನಲ್ಲಿ ವಿದ್ಯಾಭ್ಯಾಸವನ್ನು ಮಾಡಿರುತ್ತಾರೆ. ಇವರಿಗೆ ಕರ್ನಾಟಕ, ಮೈಸೂರು, ಮಂಗಳೂರು, ಮೀರತ್ ಹಾಗೂ ಜಬ್ಬಲ್‌ಪೂರ್ ವಿಶ್ವವಿದ್ಯಾನಿಲಯಗಳಿಂದ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಗಿರುತ್ತದೆ. 1978ರಲ್ಲಿ ಇವರಿಗೆ ಕೇಂದ್ರ ಸರ್ಕಾರವು ಜ್ಞಾನಪೀಠ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿರುವ ಶ್ರೀ ಕಾರಂತರು ರಾಜ್ಯದ ಮತ್ತು ದೇಶದ ಜನರ ಪ್ರೀತಿಗೆ ಪಾತ್ರರಾಗಿದ್ದರು. ಇವರು ಯಕ್ಷಗಾನ ಕಲೆಯಲ್ಲಿ ನಿಪುಣರಾಗಿದ್ದರು. ಶ್ರೀಯುತರು ದಿನಾಂಕ: 9-12-1997ರಂದು ನಿಧನರಾದರು. ಈಗ ಮಾನ್ಯ ಸಭಾನಾಯಕರು ಆಗಲಿದ ಗಣ್ಯರ ಬಗ್ಗೆ ಎರಡು ನಿಮಿಷ ಮಾತನಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ಸಭೆಗೆ ತಿಳಿಸಿರುವ ಪ್ರಕಾರ ಹಲವಾರು ಗಣ್ಯರು, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದಂಥವರು ನಮ್ಮನ್ನು ಅಗಲಿದ್ದಾರೆ. ಮೊದಲನೆಯದಾಗಿ, ನನ್ನ

ಸಂಪುಟದಲ್ಲಿ ಸದಸ್ಯರಾಗಿದ್ದಂಥ ಶ್ರೀ ಎಸ್.ಡಿ.ಜಯರಾಂರವರು ಮತ್ತು ಈ ವಿಧಾನಸಭೆಯ ಸದಸ್ಯರಾದ ಶ್ರೀ ಟಿ.ಮರುಳಸಿದ್ದನಗೌಡರು ವೈಯಕ್ತಿಕವಾಗಿ ನನಗೆ ಬಹಳ ಹತ್ತಿರವಾಗಿದ್ದರು. ಜಯರಾಂರವರು, ಅವರ ಆರೋಗ್ಯ ಸರಿಯಿಲ್ಲದೆ ಹೋದರು, ಕುಳಿತರೆ ಏಳುವುದು ಕಷ್ಟವೆನ್ನುತ್ತಿದ್ದವರು ಅಷ್ಟೊಂದು ಚಟುವಟಿಕೆಯಿಂದ ಕೆಲಸ ಮಾಡುತ್ತಿದ್ದುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿತ್ತು. ಸರ್ಕಾರದ ಕೆಲಸವನ್ನು ಬಹಳ ನಿಷ್ಠೆಯಿಂದ ಅಚ್ಚುಕಟ್ಟಾಗಿ ಮಾಡುವಂಥ ಜಯರಾಂರವರ ಅಗಲಿಕೆಯಿಂದ ನನ್ನ ಸಂಪುಟಕ್ಕೂ ನಷ್ಟವಾಗಿದೆ ಮತ್ತು ನಮ್ಮ ರಾಜ್ಯಕ್ಕೂ ನಷ್ಟವಾಗಿದೆ. ಅವರ ಶವವನ್ನು ನಾನು ಹೋಗಿ ನೋಡಿಕೊಂಡು ಬಂದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುವುದು ನಮ್ಮ ಕರ್ತವ್ಯ. ಹಾಗೆಯೇ, ಮೈಲಾರ ಮಹದೇವಪ್ಪನವರ ಕುಟುಂಬದವರಾದ ಸಿದ್ಧಮ್ಮನವರು ಹೋರಾಟದಲ್ಲಿ ಉತ್ತರ ಕರ್ನಾಟಕ ಭಾಗಕ್ಕೆ ಬಹಳ ಹೆಸರಾದ ಮನೆತನದವರು. ಅವರ ನಿಧನವು ರಾಷ್ಟ್ರಕ್ಕೆ ಒಂದು ನಷ್ಟ. ಹಾಗೆಯೇ ಶಾಸಕರಾಗಿದ್ದಂಥ ಪತ್ತಾರ್‌ರವರು, ಪುಟ್ಟಸ್ವಾಮಿಗೌಡರವರು, ಶ್ರೀನಿವಾಸನ್‌ರವರು, ವಿ.ವಿ.ವಾಯ್‌ರವರು, ಬಸವಣ್ಣನವರು ಮತ್ತು ದೀನದಯಾಳ್ ನಾಯ್ಡು ಇವರುಗಳ ನಿಧನಕ್ಕೆ ನಾವು ಸಂತಾಪವನ್ನು ವ್ಯಕ್ತಪಡಿಸುವುದರ ಜೊತೆಗೆ, ಶಿವರಾಮ ಕಾರಂತರ ಬಗ್ಗೆ ಕೆಲವು ಅನಿಸಿಕೆಗಳನ್ನು ನಾನು ಈ ಸದನದ ಮುಂದೆ ಇಡಲಿಕ್ಕೆ ಇಚ್ಛಿಪಡುತ್ತೇನೆ. ಅವರು ರಾಷ್ಟ್ರದ ಮಹಾನ್ ಸಾಹಿತಿಗಳಲ್ಲಿ ಒಬ್ಬರು. ಅವರು ಬರೀ ಸಾಹಿತಿಯಷ್ಟೇ ಅಲ್ಲ, ಅವರ ವಿಜ್ಞಾನದ ಅರಿವು, ಸಂಶೋಧನೆ, ನಾಟಕದಲ್ಲಿ ಅಭಿರುಚಿ, ಅದಕ್ಕೂ ಮಿಗಿಲಾಗಿ ವಿಶೇಷತಃ ಆ ಭಾಗದ ಒಂದು ಪರಂಪರೆ ಏನಿತ್ತು, ಆ ಪರಂಪರೆಯನ್ನು ಜಗತ್ತಿಗೆ ಅರಿವು ಮಾಡಿಕೊಟ್ಟವರು ಶಿವರಾಮ ಕಾರಂತರು. ಕೆಲವು ಸಾರಿ ಸ್ವಯಂ ಅವರೇ ಪಾತ್ರ ವಹಿಸುತ್ತಿದ್ದರು. ಅವರು ಅರಿಯದ ವಿಷಯವಿರಲಿಲ್ಲ. ವಿಜ್ಞಾನದಿಂದ ಹಿಡಿದು, ಬಾಲ ಪ್ರಪಂಚದಿಂದ ಹಿಡಿದು, 'ಮರಳಿ ಮಣ್ಣಿಗೆ'ವರೆಗೆ ಉತ್ತಮವಾದ ಕಾದಂಬರಿಗಳನ್ನು ಕೊಟ್ಟು, 'ಜ್ಞಾನಪೀಠ ಪ್ರಶಸ್ತಿ'ಯನ್ನು ಪಡೆದಂಥ ಒಬ್ಬ ಕನ್ನಡಿಗ, ಮಹಾನ್ ವ್ಯಕ್ತಿ, ಅವರ ಅಗಲಿಕೆಯಿಂದ ನಮ್ಮ ನಾಡಿಗೆ, ನಮ್ಮ ರಾಷ್ಟ್ರಕ್ಕೆ ತುಂಬಲಾಗದ ನಷ್ಟ ಎನ್ನುವುದನ್ನು ನಾನು ಕೇವಲ ಹೇಳುವುದಕ್ಕೋಸ್ಕರ ಹೇಳುತ್ತಿಲ್ಲ, ಅದು ನಿಜವಾಗಲೂ ತುಂಬಲಾಗದ ನಷ್ಟ. ಅವರ ಪ್ರವೃತ್ತಿಯನ್ನು ಬಲ್ಲವರಾದಂಥ ನಾವು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ ಎಂದರೆ ಬಹುಶಃ ಅವರು ಅದನ್ನು ಒಪ್ಪುತ್ತಾರೋ, ಇಲ್ಲವೋ? ಆದರೂ ನಾನು ಆ ಮಾತನ್ನು ಹೇಳುತ್ತೇನೆ. ಇವರೆಲ್ಲರಿಗೆ ನಾನು ಸದನದ ಪರವಾಗಿ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಜೊತೆಗೆ, ಗುಲ್ಜಾರಿಲಾಲ್ ನಂದಾರವರು ಗಾಂಧಿ ಕಾಲದಿಂದ ಬಂದಂಥ ಒಬ್ಬ ಹಿರಿಯ ನಾಯಕರು. ಎರಡು ಸಾರಿ ಅವರು ಉಸ್ತುವಾರಿ ಪ್ರಧಾನ ಮಂತ್ರಿಗಳಾಗಿದ್ದರು ಎಂದು ನನಗೆ ನೆನಪು. ಇವೊತ್ತು ಗಾಂಧಿ ತತ್ವಗಳು, ಗಾಂದಿ ಮೌಲ್ಯಗಳು ಹೇಗೆ ನಿರ್ಗಮಿಸುತ್ತಿವೆಯೋ ಹಾಗೆಯೇ ಈ ಮಹನೀಯರೂ ನಿರ್ಗಮಿಸಿದ್ದಾರೆ. ಈ ರಾಷ್ಟ್ರದ ರಾಜಕಾರಣದಲ್ಲಿ ಅವರು ಬಹಳ ಹಿರಿಯರು. ಅವರ ನಿಧನಕ್ಕೂ ನಾನು ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ಇಂದಿನ ದಿನ ತಾವು ಮಂಡಿಸಿದಂಥ ಸಂತಾಪ ಸೂಚನೆಗೆ ಬೆಂಬಲವನ್ನು ಸೂಚಿಸುತ್ತಾ, ನಾವು ಇವತ್ತು ಒಬ್ಬ ಯುವಕ ಮಂತ್ರಿಯನ್ನು ಕಳೆದುಕೊಂಡಿದ್ದೇವೆ. ಬಹುಶಃ 45-46 ವರ್ಷದ ಯುವಕರಾದ ಇವರು ಆಕಸ್ಮಿಕವಾಗಿ ಅಂದರೆ ಅನ್-ನ್ಯಾಚುರಲ್ ಡೆತ್, ಅಂದರೆ ವಯಸ್ಸಾಗಿ ತೀರಿಕೊಂಡಂಥ ವ್ಯಕ್ತಿಯಲ್ಲ. ಇದು ಪ್ರೀ-ಮೆಚ್ಯೂರ್ ಡೆತ್. ಇದು ನಿಜವಾಗಲೂ ಅವರ ಕುಟುಂಬಕ್ಕಷ್ಟೇ ಅಲ್ಲ ಇಡೀ ಜಿಲ್ಲೆಗೆ ತುಂಬಲಾರದ ನಷ್ಟ ಉಂಟಾಗಿದೆ. ಮಂಡ್ಯ ಜಿಲ್ಲೆ ಮತ್ತು ಅಕ್ಕಪಕ್ಕದ ಜಿಲ್ಲೆಗಳಲ್ಲೂ ಕೂಡ ಅವರು ಸಾಕಷ್ಟು ಹೆಸರುವಾಸಿಯಾಗಿದ್ದರು. ಇಂಥ ಒಂದು ಪ್ರೀ-ಮೆಚ್ಯೂರ್ ಡೆತ್ ಇವತ್ತು ಅವರಿಗೆ ಬಂದಿದ್ದಕ್ಕಾಗಿ ನಿಜವಾಗಲೂ ಈ ವಿಧಾನಸಭೆ ತಬ್ಬಲಿಯಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ, ಅವರು ಸಾಕಷ್ಟು ಕಾಯಿಲೆಯಿಂದ ನರಳುತ್ತಿದ್ದರೂ ಕೂಡ ತಮ್ಮ ಕೆಲಸದಲ್ಲಿ ಮಾತ್ರ ಬಹಳ ಆಸಕ್ತಿ ವಹಿಸುತ್ತಿದ್ದರು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅಂಥ ಒಬ್ಬ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಇವತ್ತು ಅವರ ಕುಟುಂಬಕ್ಕೆ ತುಂಬಲಾರದಷ್ಟು ನಷ್ಟವಾಗಿದೆ. ಬಹುಶಃ ಅದನ್ನು ಯಾವ ರೀತಿಯಿಂದಲೂ ಕೂಡ ತುಂಬಲಾಗುವುದಿಲ್ಲ. ಇಂಥ ಚಿಕ್ಕ ವಯಸ್ಸಿನಲ್ಲಿ ತೀರಿಕೊಂಡಂಥ ವ್ಯಕ್ತಿಯ ಕುಟುಂಬಕ್ಕೆ ನಿಜವಾಗಲೂ ಬಹಳ ತೊಂದರೆಯಾಗಿದೆ. ಆ ಒಂದು ತೊಂದರೆಯನ್ನು ನಿವಾರಣೆ ಮಾಡಲು ಮತ್ತು ಆ ದುಃಖವನ್ನು ಸಹಿಸತಕ್ಕಂಥ ಶಕ್ತಿಯನ್ನು ಭಗವಂತ ಆ ಕುಟುಂಬಕ್ಕೆ ಕೊಡಲಿ ಎಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಅದೇ ರೀತಿಯಾಗಿ, ಇನ್ನೊಬ್ಬ ಯುವಕ ಶಾಸಕ, ಈ ಸದನದಲ್ಲಿ ಸಾಕಷ್ಟು ಎಲ್ಲರಿಗೂ ಚಿರಪರಿಚಿತವಾದ ಮತ್ತು ವಿಶೇಷವಾಗಿ ಟ್ರೇಡ್ ಯೂನಿಯನ್ ಮೂವ್‌ಮೆಂಟ್‌ನಲ್ಲಿ ಹೆಚ್ಚಿನ ಆಸಕ್ತಿ ವಹಿಸಿದ್ದಂಥ ಮರುಳಸಿದ್ದನಗೌಡರವರೂ ಸಹ ಚಿಕ್ಕ ವಯಸ್ಸಿನವರು; ಅಂದರೆ ಸುಮಾರು 45-46 ವರ್ಷ ವಯಸ್ಸಿನ ಯುವಕ. ನಾನು ಆ ಭಾಗಕ್ಕೆ ಹೋದಾಗ ಕೇಳುತ್ತಿದ್ದೆ; ಅನೇಕ ಕಾರ್ಮಿಕರು, ಅದರಲ್ಲೂ ವಿಶೇಷವಾಗಿ ಕಬ್ಬಿಣದ ಅದಿರು ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕಂಥ ಕೆಲಸಗಾರರು ಇವರ ಬಗ್ಗೆ ಹೆಚ್ಚಿನ ಪ್ರೀತಿ ಮತ್ತು ವಿಶ್ವಾಸವನ್ನು ಇಟ್ಟುಕೊಂಡಿದ್ದರು. ಇಂಥ ಚಿಕ್ಕ ವಯಸ್ಸಿನಲ್ಲಿ ಅವರು ನಮ್ಮನ್ನು ಅಗಲಿ ಹೋಗಿದ್ದರಿಂದ ನಿಜವಾಗಲೂ ನಮ್ಮ ಪಕ್ಷಕ್ಕೆ ತುಂಬಲಾರದಷ್ಟು ನಷ್ಟವಾಗಿದೆ. ಅಷ್ಟೇ ಅಲ್ಲ, ಆ ಭಾಗದಲ್ಲಿರತಕ್ಕಂಥ ರೈತರಿಗೆ, ಕಾರ್ಮಿಕರಿಗೆ ಮತ್ತು ಬಡವರಿಗೆ ಆಶ್ರಯ ಇಲ್ಲದಂಥ ಪರಿಸ್ಥಿತಿಯಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಅಂಥ ವ್ಯಕ್ತಿಯನ್ನು ಕೂಡ ನಾವು ಇವತ್ತು ಕಳೆದುಕೊಂಡಿದ್ದೇವೆ. ಇವತ್ತು ಅವರ ಕುಟುಂಬದವರು ಸಾಕಷ್ಟು ಕಷ್ಟದಲ್ಲಿದ್ದಾರೆ. ಅವರ ತಾಯಿಯವರಿಗೆ ಆಪರೇಷನ್ ಮಾಡಿಸಬೇಕೆಂದು ಬೆಂಗಳೂರಿಗೆ ಬರುವಾಗ ದಾರಿ ಮಧ್ಯದಲ್ಲೇ ಶ್ರೀಯುತರು ತೀರಿ ಕೊಂಡರು. ನಾವು

ಅನೇಕ ಸಾರಿ ಇಲ್ಲಿ ಮಾತನಾಡುತ್ತೇವೆ, ಶಾಸಕರೆಂದರೆ ಬಹಳ ಶ್ರೀಮಂತರು, ಬೇಕಾದ್ದನ್ನು ಮಾಡುತ್ತಾರೆ, ಎಲ್ಲವೂ ಅವರ ಹತ್ತಿರ ಇರುತ್ತದೆ ಎಂದು. ಅವರ ತಾಯಿಯವರಿಗೆ ಆಪರೇಷನ್ ಮಾಡಿಸಲು ಹಣ ಇಲ್ಲ ಎಂದು ದಾವಣಗೆರೆಗೆ ಹೋಗಿ ಸಾಲ ಮಾಡಿ ಹಣ ಕೂಡಿಸಿಕೊಂಡು ಬರುವಾಗ ಅವರಿಗೆ ಈ ಒಂದು ತಾಪತ್ರಯವಾಯಿತು. ಕೊನೆಗೆ ಅವರೇ ನಿಧನರಾಗಬೇಕಾಯಿತು. ಅವರ ತಾಯಿಯವರು ಉಳಿದುಕೊಂಡರು. ಇಂಥ ಒಂದು ಪರಿಸ್ಥಿತಿ ಇದೆ. ನಾನು ಅವರ ಮನೆಗೆ ಹೋದಾಗ ಅವರ ಹೆಣ್ಣುಮಕ್ಕಳು ಅಳುತ್ತಿದ್ದರು. ನಮ್ಮ ತಾಯಿಯನ್ನು ಬದುಕಿಸಬೇಕು ಎಂದು ಹೇಳಿ ಹೋದಂಥ ಮನುಷ್ಯ ತನ್ನ ಜೀವವನ್ನು ಕಳೆದುಕೊಂಡಿದ್ದಾರೆ ಎಂದು ಸಾಕಷ್ಟು ಕಷ್ಟವನ್ನು, ಸಂಕಟವನ್ನು ಪಡುತ್ತಿದ್ದರು. ಇಂಥ ಅನೇಕ ಕುಟುಂಬಗಳವರು ಇವತ್ತು ನಮ್ಮ ರಾಜ್ಯದಲ್ಲಿ ಶಾಸಕರಾಗಿದ್ದಾರೆ. ಯಾರಿಗೆ ಗತಿ ಇಲ್ಲ ಮತ್ತು ಯಾರು ತೊಂದರೆಯಲ್ಲಿದ್ದಾರೆ, ಅಂಥವರ ಬಗ್ಗೆ ಏನಾದರೂ ಒಂದು ಅನುಕಂಪ ತೋರಿಸತಕ್ಕ ಕೆಲಸವನ್ನು ಸರ್ಕಾರದವರು ಮಾಡಬೇಕು. ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

ಅದೇ ರೀತಿಯಾಗಿ, ಮಾಜಿ ಉಸ್ತುವಾರಿ ಪ್ರಧಾನ ಮಂತ್ರಿಗಳಾದ ಶ್ರೀಮಾನ್ ಗುಲ್ಜಾರಿಲಾಲ್ ನಂದಾರವರು ಒಂದು ಶತಮಾನ ಕಾಲ ಬದುಕಿ ಈ ಧೇಶಕ್ಕೆ ಮಾರ್ಗದರ್ಶನವನ್ನು ಮಾಡಿದರು. ಎರಡು ಸಾರಿ ಉಸ್ತುವಾರಿ ಪ್ರಧಾನ ಮಂತ್ರಿಗಳಾಗಿ ಕೂಡ ಕೆಲಸವನ್ನು ಮಾಡಿದರು. ಹೀಗೆ, ಅಪ್ಪಟ ಗಾಂಧೀವಾದಿ ಮತ್ತು ವಿಶೇಷವಾಗಿ ಅಹಮದಾಬಾದಿನಲ್ಲಿ ಮತ್ತು ಬಾಂಬೆಯಲ್ಲಿ ಟೆಕ್ಸ್‌ಟೈಲ್ ವರ್ಕರ್ಸ್ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ, ಆ ಕಾರ್ಮಿಕರನ್ನು ಸಂಘಟನೆ ಮಾಡಿ, ಟ್ರೇಡ್ ಯೂನಿಯನ್ ಮೂವ್‌ಮೆಂಟ್‌ನಲ್ಲಿ ಒಂದು ಹೊಸ ಜೀವವನ್ನು ಕಾಂಗ್ರೆಸ್ ಪಕ್ಷಕ್ಕೆ ಇಂಟೆಕ್ ಮುಖಾಂತರ ಕೊಟ್ಟಂಥ ಒಬ್ಬ ಮಹಾನ್ ವ್ಯಕ್ತಿ ಅವರು. ಅಂಥ ಪ್ರಾಮಾಣಿಕ ಮತ್ತು ದಕ್ಷ ವ್ಯಕ್ತಿಯನ್ನು ಕೂಡ ಇವತ್ತು ನಾವು ಕಳೆದುಕೊಂಡಿದ್ದೇವೆ.

ಅದೇ ರೀತಿಯಾಗಿ ವಿ.ವಿ.ಪತ್ತಾರ್, ಇವರು ಜಮಖಂಡಿಯಿಂದ ಬಂದಂಥ ವ್ಯಕ್ತಿ. ಇವರು ಭೂ ಸುಧಾರಣಾ ಕಾನೂನಿನ ಮೇಲೆ ತಮ್ಮ ಪ್ರಭುತ್ವವನ್ನು ಇಟ್ಟುಕೊಂಡು, ಭೂ ಸುಧಾರಣಾ ಕಾನೂನಿನ ಬಗ್ಗೆ ಹೆಚ್ಚಿನ ಚರ್ಚೆಯನ್ನು ಮಾಡುತ್ತಿದ್ದಂಥ ಮತ್ತು ಯಾವಾಗಲೂ ಭೂ ಸುಧಾರಣಾ ಕಾನೂನಿಗೆ ತಿದ್ದುಪಡಿ ಬಂದರೆ, ಅದರ ಮೇಲೆ ಸಾಕಷ್ಟು ಬೆಳಕು ಚೆಲ್ಲತಕ್ಕಂಥ ವ್ಯಕ್ತಿ ಅವರಾಗಿದ್ದರು. ಅವರು ಈ ಸದನದಲ್ಲಿದ್ದಾಗ ಭೂ ಸುಧಾರಣ ಕಾನೂನಿಗೆ ಸಾಕಷ್ಟು ಕೊಡುಗೆಯನ್ನು ನೀಡಿದ್ದಾರೆ ಎಂದು ಈ ಸಂದರ್ಭದಲ್ಲಿ ನಾನು ನೆನಪಿಸಿಕೊಳ್ಳಬೇಕಾಗುತ್ತದೆ.

ಅದೇ ರೀತಿಯಾಗಿ ಶ್ರೀಮತಿ ಮೈಲಾರ ಸಿದ್ಧಮ್ಮನವರು ಸ್ವಾತಂತ್ರ್ಯ ಹೋರಾಟ ಮನೆತನದಿಂದ ಬಂದಂಥವರು. ಅವರನ್ನೂ ಕೂಡ ನಾವು ಇವತ್ತು

ಕಳೆದುಕೊಂಡಿದ್ದೇವೆ. ಅವರು ಗಾಂಧೀಜಿಯವರ ನಿಕಟವರ್ತಿಯಾಗಿದ್ದರು, ಅವರ ತತ್ವದ ಮೇಲೆ ನಂಬಿಕೆ ಇಟ್ಟು ಕೆಲಸ ಮಾಡತಕ್ಕಂಥ ಒಬ್ಬ ಹೆಣ್ಣುಮಗಳಾಗಿದ್ದರು.

ಅದೇ ರೀತಿಯಾಗಿ, ವಿ.ವಿ.ವಾಯಿ ಅವರು ಬಹಳ ಸರಳ ಸಾದಾ ಮನುಷ್ಯರಾಗಿದ್ದರು. ಅವರು ವಿಶೇಷವಾಗಿ, ಸೇವಾದಳದಲ್ಲಿ ಆಸಕ್ತಿ ವಹಿಸಿ ಕೆಲಸ ಮಾಡಿದಂಥ ವ್ಯಕ್ತಿ. ಸಾಕಷ್ಟು ವಯಸ್ಸಾಗಿದ್ದರೂ ಕೂಡ ಈ ಒಂದು ಸಾಮಾಜಿಕ ಚಟುವಟಿಕೆಯಲ್ಲಿ, ಅದರಲ್ಲೂ ವಿಶೇಷವಾಗಿ ಸೇವಾದಳದಂಥ ಚಟುವಟಿಕೆಗಳಲ್ಲಿ ಭಾಗವಹಿಸಿ ಅವರು ಸಾಕಷ್ಟು ಗಾಂಧಿ ತತ್ವದ ಮೇಲೆ ನಡೆದುಕೊಂಡು, ಕೊನೆಯವರೆಗೆ ಹೋರಾಟವನ್ನು ನಡೆಸಿದ್ದರು. ಆ ವ್ಯಕ್ತಿಯನ್ನೂ ಕೂಡ ನಾವು ಇವತ್ತು ಕಳೆದುಕೊಂಡಿದ್ದೇವೆ.

ಅದೇ ರೀತಿಯಾಗಿ ಶ್ರೀ ಪುಟ್ಟಸ್ವಾಮಿ ಗೌಡರು, ಶ್ರೀ ಎಂ.ಎಸ್.ಶ್ರೀನಿವಾಸ್‌ರವರು ಶ್ರೀ ಹೆಚ್.ಎನ್.ಬಸಣ್ಣರವರು ಮತ್ತು ಶ್ರೀ ವಿ.ಬಿ.ದೀನ್‌ದಯಾಳ್ ನಾಯ್ಡು ಇವರುಗಳನ್ನು ಸಹ ನಾವು ಕಳೆದುಕೊಂಡಿದ್ದೇವೆ. ಶ್ರೀ ದೀನದಯಾಳು ನಾಯ್ಡು - ಇವರು ಬೆಂಗಳೂರು ನಗರದಲ್ಲಿ ಚಿರಪರಿಚಿತರು ಮತ್ತು ಅಜಾತಶತ್ರು ಆಗಿದ್ದರು. ಅವರ ಬಳಿಗೆ ಬರುವ ಯಾರನ್ನೇ ಆಗಲಿ ಸಹೃದಯದಿಂದ ಮಾತನಾಡಿಸುತ್ತಿದ್ದರಲ್ಲದೆ ಅವರ ನಡವಳಿಕೆಯಿಂದ ಎಂಥವರನ್ನು ಕೂಡ ಗೆಲ್ಲಬಲ್ಲವರಾಗಿದ್ದರು. ಇಂಥ ಒಬ್ಬ ಸರಳ ಸ್ವಭಾವದ ವ್ಯಕ್ತಿಯನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ.

ಕೊನೆಯದಾಗಿ, ಶ್ರೀಮಾನ್ ಶಿವರಾಮ ಕಾರಂತರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಕೂಡ ಮಾತನಾಡಿದ್ದಾರೆ. ಶ್ರೀ ಕಾರಂತರ ಊರಿನಲ್ಲಿ ಶಾಲೆಯ ಪಕ್ಕದಲ್ಲಿ ಒಂದು ಆಟದ ಮೈದಾನ ಇದ್ದು, ಆ ಮೈದಾನ ದುರುಪಯೋಗವಾಗುತ್ತಿದೆ, ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಸ್ವತಃ ತಮ್ಮ ಕೈಯಿಂದಲೇ ಒಂದು ಪತ್ರವನ್ನು ನನಗೆ ಬರೆದಿದ್ದರು. ಅವರು ಬರೆದಂಥ ಪತ್ರವನ್ನು ನೇರವಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿದ್ದೇನೆ. ಅದಕ್ಕೆ ಉತ್ತರ ಕೂಡ ಬಂದಿದೆ. ಆದರೆ ಅದರ ಮೇಲೆ ಏನು ನಿರ್ಣಯ ಆಯಿತು, ಎನ್ನತಕ್ಕಂಥದ್ದು ಗೊತ್ತಾಗಲಿಲ್ಲ. ಏಕೆಂದರೆ, ಅಂಥ ಒಬ್ಬ ಮಹಾನ್ ವ್ಯಕ್ತಿ ಆ ಆಟದ ಮೈದಾನಕ್ಕೆ ತನ್ನ ಕಳಕಳಿಯನ್ನು ವ್ಯಕ್ತಪಡಿಸಿ, ಆ ಶಾಲೆಯ ಮೈದಾನವನ್ನು ಉಳಿಸಿಕೊಳ್ಳಬೇಕು ಎನ್ನುವ ಅವರ ಅನಿಸಿಕೆ ಏನು ಇತ್ತು, ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಂಡು, ತಾವು ಏನು ಇವತ್ತು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ ಅದಕ್ಕೆ ಬೆಂಬಲವನ್ನು ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ತಾವು ತಂದಿರುವಂಥ ಈ ಸಂತಾಪಸೂಚಕ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಈ ಸದನದಲ್ಲಿ ನಮ್ಮ ಜೊತೆಯಲ್ಲಿ ಇದ್ದಂಥ ಗಣಿ ಮತ್ತು ಭೂವಿಜ್ಞಾನ ಸಚಿವರಾದ

ಶ್ರೀ ಎನ್.ಡಿ.ಜಯರಾಂ - ಅವರು ಇವತ್ತು ಬೆಳಗಿನ ಜಾವ ದೈವಾಧೀನರಾದುದನ್ನು ಕೇಳಿ ನಮ್ಮೆಲ್ಲರಿಗೂ ಆಘಾತವಾಗಿದೆ. ನಾನು ಸಹ ಮಂಡ್ಯ ಜಿಲ್ಲೆಯವನಾಗಿದ್ದೇನೆ. ಮೂರ್ನಾಲ್ಕು ದಿವಸಗಳ ಹಿಂದೆ ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಿರಬೇಕಾದರೆ ಶ್ರೀ ಜಯರಾಂರವರ ಆರೋಗ್ಯ ಸರಿಯಿಲ್ಲವೆಂದು ಕೇಳಿದ್ದೆ. ಆದರೆ ಅವರನ್ನು ಬದುಕಿದ್ದಾಗ ನೋಡುವಂಥ ಅವಕಾಶ ಸಿಗಲಿಲ್ಲ, ಎನ್ನುವಂಥದ್ದು ತುಂಬಾ ನೋವು ತರುವಂಥ ಸಂಗತಿಯಾಗಿದೆ.

ಅದೇ ರೀತಿ ಶಾಸಕರಾದಂಥ ಶ್ರೀ ಟಿ.ಮರುಳಸಿದ್ದನಗೌಡರು, ಮಾಜಿ ಉಸ್ತುವಾರಿ ಪ್ರಧಾನಮಂತ್ರಿಗಳಾದ ಶ್ರೀ ಗುಲ್ಜಾರಿಲಾಲ್ ನಂದಾರವರು, ಮಾಜಿ ಮಂತ್ರಿಗಳಾದಂಥ ಶ್ರೀ ಎಂ.ಎಸ್.ಶ್ರೀನಿವಾಸನ್‌ರವರು ಹಾಗೂ ಶ್ರೀ ವಿ.ವಿ.ಪತ್ತಾರ್‌ರವರು, ಮಾಜಿ ಶಾಸಕರಾದ ಮೈಲಾರ ಸಿದ್ದಮ್ಮನವರು, ಶ್ರೀ ವಿ.ವಿ.ವಾಯ್‌ಯವರು, ಶ್ರೀ ಪುಟ್ಟಸ್ವಾಮಿ ಗೌಡರು, ಶ್ರೀ ಹೆಚ್.ಎಸ್.ಬಸಣ್ಣನವರು, ಶ್ರೀ ವಿ.ವಿ.ದೀನದಯಾಳ್ ನಾಯ್ಡುರವರು ಮತ್ತು ಸಾಹಿತಿಗಳಾದಂಥ ಶ್ರೀ ಶಿವರಾಮ್ ಕಾರಂತ್‌ರವರು ಸಹ ನಿಧನರಾಗಿರುವಂಥದ್ದರ ಬಗ್ಗೆ ನಾವು ಸಂತಾಪ ಸೂಚನೆ ಮಂಡಿಸುತ್ತಿದ್ದೇವೆ. ಕಡಲತೀರದ ಭಾರ್ಗವ ಎಂದು ಹೆಸರು ಪಡೆದಂಥ, ಜ್ಞಾನಪೀಠ ಪ್ರಶಸ್ತಿ ವಿಜೇತರಾದಂಥ, ವಿಶೇಷವಾಗಿ ಪರಿಸರದಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳಬೇಕೆಂದು ಜೀವನದುದ್ದಕ್ಕೂ ಹೋರಾಟ ಮಾಡಿದಂಥ ಮಹಾನ್ ವ್ಯಕ್ತಿ ಶ್ರೀಶಿವರಾಮ ಕಾರಂತರು ಆಗಿದ್ದರು. ಅವರಲ್ಲಿ ಇದ್ದಂಥ ಜ್ಞಾನಭಂಡಾರದ ಆಳ ಸಮುದ್ರದ ಆಳ ಎಷ್ಟು ದೊಡ್ಡದಿರುತ್ತದೋ ಅಷ್ಟು ದೊಡ್ಡದೆಯ ಹೇಳಿದರೆ ಅತಿಶಯೋಕ್ತಿಯಾಗಲಾರದೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಇದ್ದುದನ್ನು ಇದ್ದಹಾಗೆ ಸತ್ಯವಾಗಿ, ನೇರವಾಗಿ ಹೇಳುವಂಥ ಒಬ್ಬ ಬಹಳ ನಿಷ್ಠುರವಾದಿ ವ್ಯಕ್ತಿಯಾಗಿದ್ದರು. ಅವರು ಸರ್ಕಾರದ ಯಾವುದೇ ಮುಲಾಜಿನಲ್ಲಿ, ಸಹಾಯದಿಂದ ಬದುಕಿದವರು ಅಲ್ಲ. ಶ್ರೀ ಕಾರಂತರ ಆಸ್ಪತ್ರೆಯ ಖರ್ಚುವೆಚ್ಚವನ್ನು ಸರ್ಕಾರ ಭರಿಸುತ್ತದೆಂದು ಮುಂದೆ ಹೋದಾಗಲೂ ಸಹ -''ಇಲ್ಲ, ನಮ್ಮ ತಂದೆಯವರ ಅಪೇಕ್ಷೆ ಇದಲ್ಲ, ನಮಗೆ ಸರ್ಕಾರದ ಯಾವ ಸವಲತ್ತೂ ಸಹ ಬೇಡ'' ಎಂದು ಅವರ ಮಗ ಶ್ರೀ ಉಲ್ಲಾಸ ಕಾರಂತರು ಅತ್ಯಂತ ಗೌರವದಿಂದ ಅದನ್ನು ತಿರಸ್ಕರಿಸಿದರೆಂದು ಕೇಳಿದ್ದೇವೆ. ನಾವು ಅವರಿಗೆ ಸಲ್ಲಿಸಬೇಕಾದಂಥ ಗೌರವ ಯಾವ ರೀತಿ ಇರಬೇಕು ಎಂಬುದರ ಬಗ್ಗೆ ನಾನು ಒಂದು ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಯಾವ ಒಂದು ಪರಿಸರದಲ್ಲಿ ಸಮತೋಲನವನ್ನು ಕಾಪಾಡಲು ಜೀವನದ ಉದ್ದಕ್ಕೂ ಹೋರಾಟ ಮಾಡಿದರೋ, ಅವರ ಹೆಸರಿನಲ್ಲಿ ಒಂದು ದತ್ತಿಯನ್ನು ಅಲ್ಲಿ ಸ್ಥಾಪನೆ ಮಾಡಿ, ಈ ಪರಿಸರದಲ್ಲಿ ಕೆಲಸ ಮಾಡುವುದಕ್ಕೆ ಯಾರ್ಯಾರಿಗೆ ಆಸಕ್ತಿ ಇದೆಯೋ ಅವರೆಲ್ಲರಿಗೂ ಅಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಬಹುಶಃ ಇದು ಶ್ರೀ ಕಾರಂತರಿಗೆ ಗೌರವ ಕೊಟ್ಟಂತಾಗುತ್ತದೆಂದು ನಾನಾದರೂ ಭಾವಿಸಿದ್ದೇನೆ. ಆ ದಿಕ್ಕಿನಲ್ಲಿ ಸರ್ಕಾರ ಯೋಚನೆ

ಮಾಡಬೇಕೆಂದು ವಿನಂತಿ ಮಾಡಿ, ಇವತ್ತು ಈ ಮೃತರೆಲ್ಲರ ಆತ್ಮಕ್ಕೆ ಶಾಂತಿ ಕೋರಿ, ಅವರ ಬಂಧುಬಳಗದವರಿಗೆ ಇವರನ್ನು ಕಳೆದುಕೊಂಡ ನೋವನ್ನು ತಡೆದುಕೊಳ್ಳುವಂಥ ಶಕ್ತಿ ಭಗವಂತ ಕೊಡಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ ಈ ನಿರ್ಣಯಕ್ಕೆ ನಾನು ಸಂಪೂರ್ಣ ಬೆಂಬಲ ಸೂಚಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂಥ ಸಂತಾಪಸೂಚಕ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ, ಶ್ರೀ ಎಸ್.ಡಿ.ಜಯರಾಂರವರು ಈ ದಿನ ಬೆಳಿಗ್ಗೆ ದೈವಾಧೀನರಾಗಿದ್ದು, ಇದರಿಂದ ಈ ರಾಜ್ಯಕ್ಕೆ ಮತ್ತು ಈ ಸದನಕ್ಕೆ ಅಪಾರವಾದಂಥ ನಷ್ಟವಾಗಿದೆ. ಶ್ರೀ ಜಯರಾಂರವರು ಸದನಕ್ಕೆ ಬಂದ ತಕ್ಷಣ ಸುಳಿತುಕೊಂಡು ನಿದ್ರೆ ಮಾಡುತ್ತಿದ್ದರು. ಇಲ್ಲಿ ಕುಳಿತುಕೊಂಡಿರುವ ನಮಗಂತೂ ಅವರು ಅಲ್ಲಿ ಬಂದು ನಿದ್ದೆ ಮಾಡುತ್ತಾ ಕುಳಿತಾಗಲೆಲ್ಲ ಪ್ರತಿದಿನ ನಮ್ಮ ಗಮನಕ್ಕೆ ಬರುತ್ತಿತ್ತು. ಅವರು ನಿದ್ರೆ ಮಾಡಿದರೂ ಚಿಂತೆ ಇಲ್ಲ, ನಾವು ಅದರ ಬಗ್ಗೆ ಈ ಸದನದಲ್ಲಿ ಆಕ್ಷೇಪಿಸುವುದು ಬೇಡ ಎಂದು ನಾನು ಹೇಳುತ್ತಿದ್ದೆ. ಕಾರಣ, ಅವರ ಆರೋಗ್ಯ ಸರಿಯಿಲ್ಲದಿರುವ ಬಗ್ಗೆ, ಅವರ ಶರೀರದ ಬಗ್ಗೆ ಅವರನ್ನು ನೋಡಿದಾಗ ಒಂದು ರೀತಿಯ ಕನಿಕರ, ಮರುಕ ಉಂಟಾಗುತ್ತಿತ್ತು. ಕೆಲವು ಸಾರಿ ನಾವು ಅವರಿಗೆ ಹಾಸ್ಯ ಮಾಡಿದ್ದು ಉಂಟು. ಶ್ರೀಮಾನ್ ಹನುಮಂತಯ್ಯನವರು ಈ ಸದನವನ್ನು ಮಾಡುವಾಗ, ಈ ರೀತಿ ಇರತಕ್ಕಂಥ ವ್ಯಕ್ತಿಗಳಿಗೆ ಕುರ್ಚಿಗಳ ವ್ಯವಸ್ಥೆಯನ್ನು ಮಾಡಿಲ್ಲವಲ್ಲ ಎನ್ನತಕ್ಕಂಥ ಮಾತನ್ನು ಸಹ ನಾವು ಅವರ ಜೊತೆಯಲ್ಲಿ ಆಡಿದ್ದುಂಟು. ಸದನದೊಳಗೆ ಬರತಕ್ಕಂಥ ವ್ಯಕ್ತಿಗಳಲ್ಲಿ ಇಡೀ ಸದನದ ಗಮನವನ್ನು ಸೆಳೆಯುತ್ತಿದ್ದಂಥ ವ್ಯಕ್ತಿಗಳಲ್ಲಿ ಶ್ರೀ ಎಸ್.ಡಿ.ಜಯರಾಂರವರು ಒಬ್ಬರೇ. ಬೇರೆ ಯಾರೂ ಸಹ ಆ ತರಹ ಗಮನ ಸೆಳೆಯತಕ್ಕಂಥವರು ಇರಲಿಲ್ಲ. ಅವರು ವರ್ಣರಂಜಿತವಾದಂಥ ವ್ಯಕ್ತಿತ್ವವುಳ್ಳವರಾಗಿದ್ದರು, ಬಹಳ ಒಳ್ಳೆಯ ನಡೆನುಡಿಯುಳ್ಳವರಾಗಿದ್ದರು, ಇನ್ನೊಬ್ಬರ ಬಗ್ಗೆ ಅವರು ಕೆಟ್ಟದ್ದನ್ನು ಆಡಿದಂಥ ವ್ಯಕ್ತಿ ಅಲ್ಲ. ಈ ವಿಷಯದಲ್ಲಿ ಅವರ ಬಗ್ಗೆ ನನಗೆ ಅಪಾರವಾದಂಥ ಗೌರವವಿದೆ. ನಾನು ಅವರನ್ನು ಭೇಟಿ ಮಾಡಿದಾಗಲೆಲ್ಲ ಅವರ ಆರೋಗ್ಯದ ಬಗ್ಗೆ ವಿಚಾರಿಸುತ್ತಿದ್ದೆ. ಅದಕ್ಕೆ ಅವರು-ನಾನು ಏನೇನು ಔಷಧಿ ಮಾಡಿಸಬೇಕೋ ಅದನ್ನೆಲ್ಲ ಮಾಡಿದ್ದೇನೆ, ಆದರೂ ನನಗೆ ಈ ಪರಿಸ್ಥಿತಿ ಬಿಟ್ಟುಹೋಗತಕ್ಕಂಥದ್ದು ಅಲ್ಲ ಎನ್ನುವಂಥ ಮಾತನ್ನು ಹೇಳಿದರು. ನಾನು ಇವತ್ತು ಬೆಳಿಗ್ಗೆ ಒಬ್ಬ ಪೊಲೀಸ್ ಅಧಿಕಾರಿಯವರ ಜೊತೆಯಲ್ಲಿ ದೂರವಾಣಿ ಮುಖಾಂತರ ಮಾತನಾಡಿದಾಗ, ಶ್ರೀ ಜಯರಾಂರವರು ಇವತ್ತು ಬೆಳಿಗ್ಗೆ ತೀರಿಕೊಂಡರು ಎಂದು ನನಗೆ ಹೇಳಿದಾಗ ನನ್ನ ಮನಸ್ಸಿಗೆ ಬಹಳ ವೇದನೆ, ನೋವು ಆಯಿತು. ಅವರ ಆತ್ಮಕ್ಕೆ ಶಾಂತಿ ದೊರಕಲೆಂದು ಆಶಿಸುತ್ತೇನೆ.

ಶ್ರೀ ಗುಲ್ಜಾರಿಲಾಲ್ ನಂದಾರವರು ಈ ದೇಶದ ಗಾಂಧಿಯುಗದ ಒಬ್ಬ ಮಹಾನ್ ವ್ಯಕ್ತಿ. ಆ ಯುಗದ ಈ ಮಹಾಪುರುಷನ ಕಣ್ಮರೆಯಿಂದ ಈ ದೇಶಕ್ಕೆ ಅಪಾರವಾದಂಥ

ನಷ್ಟವಾಗಿದೆ ಎನ್ನುವ ಮಾತನ್ನು ಹೇಳಿ ನಾನು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಿದ್ದೇನೆ. ಶ್ರೀ ಶಿವರಾಮ್ ಕಾರಂತರು ಪ್ರಪಂಚದಲ್ಲಿ, ದೇಶದಲ್ಲಿ ಒಬ್ಬ ವಿಶಿಷ್ಟವಾದಂಥ, ಅತ್ಯುನ್ನತವಾದ ಮಹಾನ್ ಸಾಹಿತಿ ಎಂದು ಹೇಳಿದರೆ ತಪ್ಪಾಗಲಾರದು. ಇವರು ಕೈಯಾಡಿಸದೆ ಇರತಕ್ಕಂಥ ಕ್ಷೇತ್ರವೇ ಇಲ್ಲ. ಎಲ್ಲಾ ಕ್ಷೇತ್ರಗಳ ಬಗ್ಗೆ ಬರೆದು ಕನ್ನಡ ಸಾಹಿತ್ಯ ಕ್ಷೇತ್ರದ ಒಬ್ಬ ದೊಡ್ಡ ದಿಗ್ಗಜರಾಗಿ ಬೆಳೆದು ಕೊನೆಯವರೆಗೆ ಆರೋಗ್ಯವಂತರಾಗಿ, ಕೊನೆಯ ಗಳಿಗೆಯಲ್ಲಿ ಅವರು ಸಣ್ಣ ಒಂದು ಹೃದಯದ ಕಾಯಿಲೆಯಿಂದ ನರಳಿ ಕೊನೆಯುಸಿರೆಳೆದಂಥದ್ದು ನಮಗೆಲ್ಲರಿಗೆ ಬಹಳ ನೋವನ್ನು ತಂದಿದೆ.

ಅದೇ ಪ್ರಕಾರ ಶ್ರೀಮತಿ ಮೈಲಾರ ಸಿದ್ದಮ್ಮನವರು, ಶ್ರೀ ವಿ.ವಿ.ಪತ್ತಾರ್‌ರವರು, ಶ್ರೀ ಪುಟ್ಟಸ್ವಾಮಿಗೌಡರವರು, ಶ್ರೀ ವಿ.ವಿ.ವಾಯಿಯವರು, ಶ್ರೀ ವಿ.ಪಿ. ದೀನದಯಾಳ್ ನಾಯ್ಡುರವರು, ಶ್ರೀ ದೀನದಯಾಳ್ ನಾಯ್ಡುರವರು - ನಮ್ಮ ಬೆಂಗಳೂರಿನಲ್ಲಿ ಮೇಯರ್ ಆಗಿದ್ದಂಥವರ ಪೈಕಿಯಲ್ಲಿ ಒಬ್ಬ ಆದರ್ಶ ಮೇಯರ್ ಆಗಿದ್ದರು. ಅವರು ಬೆಂಗಳೂರು ಕಾರ್ಪೊರೇಷನ್‌ನ ಉಪ ಮೇಯರ್ ಹಾಗೂ ಮೇಯರ್ ಆಗಿ ಸೇವೆ ಸಲ್ಲಿಸಿರುತ್ತಾರೆ. ಅವರು ಮೇಯರ್ ಆಗಿದ್ದಂಥ ಕಾಲದಲ್ಲಿ ಮೇಯರ್ ಎಂದು ಹೇಳಿದರೆ ಮುಖ್ಯಮಂತ್ರಿಗಳಿಗೆ ಎಷ್ಟು ಗೌರವವಿತ್ತೋ ಅಷ್ಟೊಂದು ಗೌರವ ಒಂದು ಕಾಲದಲ್ಲಿ ಮೇಯರ್‌ಗೆ ಇತ್ತು. ಅವರು ಬೆಂಗಳೂರು ನಗರದ ಬೆಳವಣಿಗೆಗೆ ಅಪಾರವಾದಂಥ ಕೆಲಸವನ್ನು ಮಾಡಿರತಕ್ಕಂಥವರಾಗಿದ್ದಾರೆ.

ಶ್ರೀ ಟಿ.ಮರುಳಸಿದ್ದನಗೌಡರು, ಶ್ರೀ ವಿ.ವಿ.ವಾಯಿರವರು ಶ್ರೀ ಎಂ.ಎನ್.ಶ್ರೀನಿವಾಸನ್‌ರವರು, ಶ್ರೀ ಎನ್.ಹೆಚ್.ಬಸಣ್ಣರವರು ಹೀಗೆ ಇವರೆಲ್ಲರ ಅಗಲಿಕೆಯಿಂದ ಮನಸ್ಸಿಗೆ ಬಹಳ ನೋವುಂಟಾಗಿದೆ. ಅವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂಥ ಸಂತಾಪಸೂಚಕ ನಿರ್ಣಯಕ್ಕೆ ನನ್ನ ಅಭಿಮತವನ್ನು ವ್ಯಕ್ತಪಡಿಸುತ್ತಾ, ಇದರ ಪ್ರಕಾರ ಹನ್ನೊಂದು ಜನ ಪ್ರಮುಖರು ನಮ್ಮನ್ನು ಅಗಲಿದ್ದಾರೆ. ಅದರಲ್ಲಿ ಮುಖ್ಯವಾಗಿ ಶ್ರೀ ಗುಲ್ಜಾರಿಲಾಲ್ ನಂದಾರವರು, ಶ್ರೀ ಶಿವರಾಮ್ ಕಾರಂತರು ಮತ್ತು ನಮ್ಮ ಈ ಸದನದ ಸದಸ್ಯರಾಗಿದ್ದಂಥ ಶ್ರೀ ಎಸ್.ಡಿ.ಜಯರಾಂ ಮತ್ತು ಶ್ರೀ ಟಿ.ಮರುಳಸಿದ್ದನಗೌಡರು. ಶ್ರೀ ಜಯರಾಂರವರ ಆರೋಗ್ಯದ ದೃಷ್ಟಿಯಿಂದ ನಮಗೆಲ್ಲರಿಗೆ ಅವರ ಬಗ್ಗೆ ಒಂದು ರೀತಿಯಾದಂಥ ಕನಿಕರ ಇತ್ತು. ಅವರ ಆಡಳಿತದ ವಿಷಯದಲ್ಲಿ ಅಲ್ಲ. ಅವರು ಒಬ್ಬ ಒಳ್ಳೆಯ ವ್ಯಕ್ತಿ ಮತ್ತು ಅವರಿಗೆ ಆ ರೀತಿಯಾದಂಥ ಕಾಯಿಲೆ ಬರಬಾರದಾಗಿತ್ತು ಎನ್ನುವಂಥ ಅನುಕಂಪ ಎಲ್ಲರಲ್ಲೂ ಕೂಡ ಇತ್ತು. ಅವರು ಇವತ್ತು ಬೆಳಿಗ್ಗೆ ಅಕಾಲಿಕ ಮರಣ ಹೊಂದಿದರು ಎನ್ನುವ ಸುದ್ದಿ ತಿಳಿದಾಗ ನನ್ನ ಮನಸ್ಸಿಗೆ

ಬಹಳ ನೋವು ಆಯಿತು. ಅದಕ್ಕೆ ನಾನು ಅವರಿಗೆ ವೈಯಕ್ತಿಕವಾಗಿ ಹೃದಯಪೂರ್ವಕವಾಗಿ ಶ್ರದ್ಧಾಂಜಲಿಯನ್ನರ್ಪಿಸುತ್ತೇನೆ.

ಇನ್ನು ಶ್ರೀ ಗುಲ್ಜಾರಿಲಾಲ್ ನಂದಾರವರ ಬಗ್ಗೆ ಹೇಳುವುದಾದರೆ, ಕಳೆದ ಐದಾರು ತಿಂಗಳುಗಳಲ್ಲಿ ಬೇರೆಯವರು ಸತ್ತಾಗ ಎಷ್ಟು ಪ್ರಚಾರ ಇತ್ತೋ ಅಷ್ಟು ಪ್ರಚಾರ ಶ್ರೀ ಗುಲ್ಜಾರಿಲಾಲ್ ನಂದಾರವರು ಸತ್ತಾಗ ಸಿಗಲಿಲ್ಲ. ಇದು ಏನು ತೋರಿಸುತ್ತದೆ ಎಂದರೆ-ನಾವು ಇವತ್ತು ಪ್ರತಿನಿಧಿಸುತ್ತಿರತಕ್ಕಂಥ ಮೌಲ್ಯಗಳು ಮತ್ತು ಗುಲ್ಜಾರಿಲಾಲ್ ನಂದಾರವರು ಪ್ರತಿನಿಧಿಸಿದಂಥ ಮೌಲ್ಯಗಳಿಗೆ ಈ ದೇಶದಲ್ಲಿ ಎಷ್ಟು ಸ್ಥಾನ ಇದೆ? ಅವರ ಬಗ್ಗೆ ಎಷ್ಟು ಆದರ ಇದೆ ಎನ್ನುವಂಥದ್ದು ಗೊತ್ತಾಗುತ್ತದೆ. ಬೇರೆಯವರು ಸತ್ತಂಥ ಸಂದರ್ಭದಲ್ಲಿ ಸಿಗತಕ್ಕಂಥ ಪ್ರಚಾರ ಮತ್ತು ಶ್ರೀ ಗುಲ್ಜಾರಿಲಾಲ್ ನಂದಾರವರು ಸತ್ತಾಗ ಸಿಕ್ಕಿದಂಥ ಪ್ರಚಾರ, ಬಹುಶಃ ಇದು ನೋಡಿದರೆ ನಮ್ಮ ದೇಶದಲ್ಲಿ ಇವತ್ತಿನ ದಿವಸ ನಾವು ಒಂದು ದುರಂತಮಯವಾದಂಥ ಘಟ್ಟವನ್ನು ತಲುಪಿದ್ದೇವೆ ಅನ್ನಿಸುತ್ತದೆ.

11.30 ಪಿ.ಎಂ

ಇವತ್ತಿನ ರಾಜಕಾರಣದ ಪರಿಸ್ಥಿತಿಯಲ್ಲಿ ಶ್ರೀ ಗುಲ್ಜಾರಿಲಾಲ್ ನಂದಾರವರಂಥವರು ಇರುವುದಕ್ಕೆ ಸಾಧ್ಯವಿಲ್ಲ. ಶ್ರೀಯುತರು ಬಹಳ ಪ್ರಾಮಾಣಿಕವಾದಂತಹ ವ್ಯಕ್ತಿಯಾಗಿದ್ದರು. ಅವರ ನಿಧನಕ್ಕೆ ಸಂತಾಪವನ್ನು ವ್ಯಕ್ತಪಡಿಸುತ್ತಾ, ಇನ್ನು ಡಾ॥ ಶಿವರಾಮ ಕಾರಂತರ ಬಗ್ಗೆ ಮಾತನಾಡತಕ್ಕಂತಹ ಶಕ್ತಿಯಾಗಲಿ, ಸಾಮರ್ಥ್ಯವಾಗಲಿ, ನಮ್ಮಂಥವರಲ್ಲಿ ಇಲ್ಲ. ಅವರು ಮಹಾನ್ ಚೇತನವಾಗಿದ್ದರು. ಶ್ರೀಯುತರು ನಮ್ಮ ಕರ್ನಾಟಕ ರಾಜ್ಯದ ಹೆಮ್ಮೆಯ ಪುತ್ರರಾಗಿದ್ದರು. ಅದರಲ್ಲಿಯೂ ಡಾ॥ ಶಿವರಾಮಕಾರಂತರು ಮಕ್ಕಳಲ್ಲಿ ವೈಜ್ಞಾನಿಕವಾದಂತಹ ಮನೋಭಾವವನ್ನು ಬೆಳೆಸುವುದಕ್ಕೆ ಅವರು ಮಾಡಿರುವಂಥ ಶ್ರಮವನ್ನು ಬಹುಶಃ ಇದುವರೆಗೆ ಯಾರೂ ಕೂಡ ಮಾಡಿರುವುದಕ್ಕೆ ಸಾಧ್ಯವಿಲ್ಲ. ಮನುಷ್ಯರಲ್ಲಿರತಕ್ಕಂತಹ ಮೌಢ್ಯತೆಯನ್ನು, ಅಜ್ಞಾನವನ್ನು, ಅಂಧಕಾರವನ್ನು ತೊಲಗಿಸುವುದಕ್ಕೆ, ಆ ಸಣ್ಣ ಹೃದಯಗಳನ್ನು ಆಯ್ಕೆ ಮಾಡಿ, ಸಣ್ಣ ಮೆದುಳುಗಳನ್ನು ಆಯ್ಕೆ ಮಾಡಿ ಅವರು ಪಟ್ಟಂತಹ ಶ್ರಮ ಯಾರೂ ಮಾಡಿಲ್ಲ. ಅಂತಹ ಒಬ್ಬ ಅಪರೂಪವಾದಂತಹ ವ್ಯಕ್ತಿಯನ್ನು ನಾವು ಇಂದು ಕಳೆದುಕೊಂಡಿದ್ದೇವೆ. ಕರ್ನಾಟಕ ರಾಜ್ಯವು ನಿಜವಾಗಿಯೂ ಕೂಡ ಬಡವಾಗಿದೆ. ಅದಕ್ಕೆ ತಾವು ತಂದಿರತಕ್ಕಂತಹ ಸಂತಾಪ ಸೂಚನೆಗೆ ನನ್ನ ಸಂಪೂರ್ಣವಾದಂತಹ ಬೆಂಬಲವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂತಹ ಸಂತಾಪ ಸೂಚಕ ನಿರ್ಣಯವನ್ನು ಗೌರವಿಸುತ್ತಾ, ಇಂದು 11 ಜನ ಮಹನೀಯರನ್ನು ಕಳೆದುಕೊಂಡಿದ್ದೇವೆ. ಅದರಲ್ಲಿಯೂ ಇತ್ತೀಚೆಗೆ ನನ್ನ ಜೊತೆಯಲ್ಲಿಯೇ ಇದ್ದಂತಹ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಯಾಗಿದ್ದ

ಶ್ರೀ ಎಸ್.ಡಿ.ಜಯರಾಮ್‌ರವರು ಇಂದು ಬೆಳಿಗ್ಗೆ ಮೂರೂವರೆ ಗಂಟೆಗೆ ಕಾಲವಾದರು ಎಂದು ನನಗೆ ಮುಂಜಾನೆ ವಿಷಯ ತಿಳಿಯಿತು. ಶ್ರೀ ಎಸ್.ಡಿ.ಜಯರಾಮ್‌ರವರು ಮೊದಲು ನಮ್ಮ ರೈತ ಸಂಘದ ಚಳುವಳಿಯಲ್ಲಿಯೇ ಕೆಲಸವನ್ನು ಮಾಡುತ್ತಿದ್ದರು. ಶ್ರೀಯುತರು ಸುಮಾರು 16 ವರ್ಷಗಳ ಹಿಂದೆ ಒಂದು ದಿವಸ ರಾತ್ರಿ 12 ಗಂಟೆಗೆ ಬಂದು ಕೂಗಿ ನಾವು ನೀವು ಎಲ್ಲಾ ಸೇರಿ ರೈತ ಸಂಘವನ್ನು ಮಾಡೋಣವೆಂದು ಆ ಚಳುವಳಿಗೆ ನಮ್ಮನ್ನೆಲ್ಲ ಕರೆದುಕೊಂಡು ಬಂದರು. ಆ ಚಳುವಳಿಗೆ ನಮ್ಮನ್ನೆಲ್ಲಾ ಕರೆದುಕೊಂಡು ಬಂದು ಅವರು ಸಕ್ರಿಯವಾಗಿ ಕೆಲಸವನ್ನು ಸಹ ಮಾಡಿದರು. ಆದರೆ ಜನತಾ ದಳ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅವರು ಆ ಪಕ್ಷವನ್ನು ಸೇರಿಕೊಂಡರು. ಆದರೂ ಸಹ ರೈತ ಸಂಘದಲ್ಲಿ ಅವರ ಸಂಘಟನಾ ಚಾತುರ್ಯ, ಸಂಘಟನಾ ಕಾರ್ಯಕ್ರಮದ ಮೂಲಕ ರೈತ ಸಂಘವನ್ನು ಬೆಳಸತಕ್ಕಂತಹ ಕೆಲಸವನ್ನು ಮಾಡಿದರು. ಅವರು ಅನಾರೋಗ್ಯದ ಸ್ಥಿತಿಯಲ್ಲಿ ನಮ್ಮನ್ನು ಅಗಲಿದ್ದು ಬಹಳ ದುಃಖಕರವಾದಂತಹ ಸಂಗತಿಯಾಗಿದೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಇನ್ನು ಅಗಲಿರತಕ್ಕಂಥ ಎಲ್ಲಾ ಪ್ರಮುಖರು ನ್ಯಾಯ ಕ್ಷೇತ್ರದಲ್ಲಿ, ಕ್ರೀಡಾ ಕ್ಷೇತ್ರದಲ್ಲಿ, ಕೃಷಿ ಕ್ಷೇತ್ರದಲ್ಲಿ, ಮತ್ತು ಗಾಂಧಿವಾದಿಗಳಾಗಿ ಸ್ವಾತಂತ್ರ್ಯ ಹೋರಾಟಗಾರರಾಗಿ, ಸ್ವಾತಂತ್ರ್ಯ ಚಳುವಳಿಯಲ್ಲಿ ಬಹಳ ಉತ್ತಮವಾದಂತಹ ಬಳುವಳಿಯನ್ನು ಕೊಟ್ಟಿದ್ದಾರೆ. ಆ ಬಳುವಳಿಯ ಕಳಕಳಿ ನಮಗೆಲ್ಲ ಇದ್ದು, ಹುಟ್ಟು, ಸಾವುಗಳನ್ನು ನೋಡಿದಾಗ ನನಗೆ ಏನು ಅನ್ನಿಸುತ್ತದೆಂದರೆ ಒಲಂಪಿಕ್ಸ್‌ನಲ್ಲಿ ಒಂದು ರಿಲೇ ಇದ್ದ ಹಾಗೆ. ಅವರ ಆಶೋತ್ತರಗಳ ರಿಲೇಯನ್ನು ನಮ್ಮ ಕೈಯಲ್ಲಿ ಕೊಟ್ಟಿದ್ದಾರೆ. ಆ ದೊಣ್ಣೆಯನ್ನು ಕೈಯಲ್ಲಿ ಹಿಡಿದುಕೊಂಡು ನಾವು ಮುಂದೆ ನುಗ್ಗುತ್ತಿರಬೇಕು. ನಾವು ಸತ್ತ ನಂತರ ಇನ್ನೊಬ್ಬರು ದೊಣ್ಣೆಯನ್ನು ಹಿಡಿದುಕೊಂಡು ನುಗ್ಗುತ್ತಿರಬೇಕು. ಇದು ಒಂದು ರೀತಿಯಲ್ಲಿ ಮೊದಲೇ ಹೇಳಿದಂತೆ ರಿಲೇ ಇದ್ದಂತೆ. ಆದರೆ ಆ ರಿಲೇ ಗುರಿ, ಮುಂದೆ ನಡೆ ಎಂಬುದಾಗಿರುತ್ತದೆ. ಆ ಮುನ್ನಡೆಯನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಮುಂದುವರೆಯಬೇಕು. ಕನಿಷ್ಟ ಗುಣಾತ್ಮಕವನ್ನು ಮತ್ತು ಹುಟ್ಟು ಸಾವುಗಳ ಮಧ್ಯೆ ಮನುಷ್ಯ ನಾನು ಏನು ಒಳ್ಳೆಯದನ್ನು ಮಾಡಬೇಕು ಎನ್ನತಕ್ಕಂತಹ ಚಿಂತನೆಯನ್ನು ಮಾಡುವುದರ ಮೂಲಕ ಅವರು ಕೊಟ್ಟರತಕ್ಕಂತಹ ಕೊಡುಗೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಿ.ಮುನಿಯಪ್ಪ (ಗಾಂಧೀನಗರ): ಮಾನ್ಯ ಅಧ್ಯಕ್ಷರೇ, ಈ ಸದನದ ಸದಸ್ಯರಾಗಿದ್ದಂಥವರು, ಸದನದ ಹೊರಗಡೆ ಕೆಲಸ ಮಾಡಿದಂಥವರು, ಸಾಹಿತಿಗಳು, ಬೆಂಗಳೂರು ಮಹಾ ನಗರಪಾಲಿಕೆಯ ಮೇಯರ್ ಆಗಿದ್ದಂಥವರು ಹಾಗು ಇನ್ನಿತರ ಸುಮಾರು 11 ಜನರು ನಮ್ಮಿಂದ ಕಣ್ಮರೆಯಾಗಿದ್ದಾರೆ. ಅವರಿಗೆ ಸಂತಾಪವನ್ನು ಸೂಚಿಸುವ ನಿರ್ಣಯವನ್ನು ತಾವು ಮಂಡಿಸಿರುತ್ತೀರಿ. ಅದಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಮಾನ್ಯ ಎಸ್.ಡಿ.ಜಯರಾಂ ಗಣಿ ಮತ್ತು ಭೂ ವಿಜ್ಞಾನ

ಮಂತ್ರಿಗಳಾಗಿದ್ದರಿಂದ ಅವರನ್ನು ನಾವುಗಳೆಲ್ಲರೂ ಬಹಳ ಸಮೀಪದಿಂದ ನೋಡುತ್ತಿದ್ದೆವು. ಅವರು ಆ ಬಾಗಿಲಿನಿಂದ ಬಹಳ ವೇಗವಾಗಿ ಬರತಕ್ಕಂತಹ ಸಂದರ್ಭದಲ್ಲಿ ಅವರ ಒಂದು ಆಕಾರವನ್ನು ನಾವು ನೋಡಿ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಅವರು ಚೇರ್‌ನಲ್ಲಿ ಯಾವ ರೀತಿಯಲ್ಲಿ ಕುಳಿತುಕೊಳ್ಳುತ್ತಾರೆಂದು ಬಹಳ ಕುತೂಹಲದಿಂದ ನೋಡುತ್ತಿದ್ದೆವು. ಅವರನ್ನು ಯಾವಾಗಲಾದರೂ ಸಹ ಮಾತನಾಡಿಸಿದರೆ ಎಷ್ಟು ಮಾತನಾಡಬೇಕೋ ಅಷ್ಟನ್ನು ಮಾತ್ರ ಮಾತನಾಡುತ್ತಿದ್ದರು. ಒಳ್ಳೆಯ ಹೃದಯವಂತಿಕೆಯನ್ನು ಹೊಂದಿದ್ದಂಥವರು. ಆದರೆ ಅವರು ಇವತ್ತಿನ ದಿವಸ ನಮ್ಮಿಂದ ಕಣ್ಮರೆಯಾಗಿದ್ದಾರೆ. ಶಾಸನ ಸಭೆಯಲ್ಲಿ ನಮ್ಮ ಜೊತೆಯಲ್ಲಿ ಕೆಲಸವನ್ನು ಮಾಡಿದಂತಹ ಮರುಳಸಿದ್ಧನಗೌಡರು ಮತ್ತು ಈ ದೇಶದ ಮಾಜಿ ಪ್ರಧಾನಿಗಳಾಗಿದ್ದ ಶ್ರೀ ಗುಲ್ಜಾರಿಲಾಲ್ ನಂದಾರವರು, ಮಹಾತ್ಮ ಗಾಂಧಿಜಿಯವರು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದಂತಹ ಸಂದರ್ಭದಲ್ಲಿ, ಬ್ರಿಟೀಷರೇ ಭಾರತದಿಂದ ಕಾಲು ತೆಗೆಯಿರಿ ಎಂಬ ಕೂಗನ್ನು ಇಟ್ಟಾಗ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದಂತಹ ಮಹಾನ್ ವ್ಯಕ್ತಿ; ಅವರೂ ಕೂಡ ನಮ್ಮಿಂದ ಕಣ್ಮರೆಯಾಗಿದ್ದಾರೆ. ಮತ್ತು ಬೆಂಗಳೂರು ಮಹಾನಗರಪಾಲಿಕೆಯ ಮೇಯರ್ ಆಗಿದ್ದಂತಹ ವಿ.ಬಿ.ದೀನದಯಾಳ್ ನಾಯ್ಡುರವರು ಈ ವಯಸ್ಸಿನಲ್ಲಿಯೂ ಕೂಡ ಬೆಂಗಳೂರು ನಗರದಲ್ಲಿ ಯಾವುದೇ ಕಾರ್ಯಕ್ರಮಕ್ಕೆ ಕರೆದರೂ ಕೂಡ ಅವರು ಯುವಕರಂತೆ ಬರುತ್ತಿದ್ದರು. ಅದರಲ್ಲಿಯೂ ಕೂಡ ಸ್ಕೌಟ್ ಕಾರ್ಯಕ್ರಮಗಳಿಗೆಲ್ಲಾ ಭಾಗವಹಿಸುತ್ತಿದ್ದರು. ಅವರೂ ಕೂಡ ಇವತ್ತು ನಮ್ಮಿಂದ ಕಣ್ಮರೆಯಾಗಿದ್ದಾರೆ.

ಅದೇ ರೀತಿಯಲ್ಲಿ ಡಾ॥ ಶಿವರಾಮ ಕಾರಂತರು ಕರ್ನಾಟಕ ರಾಜ್ಯದ ಒಬ್ಬ ಹೆಮ್ಮೆಯ ಪುತ್ರರಾಗಿದ್ದರು, ಅವರು ಪರಿಸರವಾದಿಯಾಗಿ ಯಾವುದೇ ಸಮಾರಂಭಗಳಿಗೆ ಕರೆದರೂ ಯುವಕರಂತೆ ಉತ್ಸಾಹಿಗಳಾಗಿ ಬಂದು ಭಾಗವಹಿಸುತ್ತಿದ್ದರು. ಶ್ರೀಯುತರು ಜ್ಞಾನಪೀಠ ಪ್ರಶಸ್ತಿ ವಿಜೇತರು, ಮಹಾನ್ ವ್ಯಕ್ತಿಗಳಾಗಿದ್ದರು. ಇದೇರೀತಿ ಇನ್ನೂ ಅನೇಕ ವ್ಯಕ್ತಿಗಳು ನಮ್ಮಿಂದ ಕಣ್ಮರೆಯಾಗಿದ್ದಾರೆ. ತಾವು ಏನು ಸಂತಾಪ ಸೂಚಕ ನಿರ್ಣಯವನ್ನು ತಂದಿರುತ್ತೀರಿ ಅದಕ್ಕೆ ನಾನು ಕೂಡ ಬೆಂಬಲಿಸಿ, ಕಣ್ಮರೆಯಾದಂತಹ ವ್ಯಕ್ತಿಗಳ ಕುಟುಂಬದವರಿಗೂ, ಅವರು ಇದ್ದಂತಹ ರಾಜಕೀಯ ಪಕ್ಷಕ್ಕೂ ಮತ್ತು ಅವರ ಅಭಿಮಾನಿಗಳಿಗೂ ಅವರನ್ನು ಕಳೆದುಕೊಂಡಂತಹ ನೋವನ್ನು ಪ್ರಕೃತಿಯು ಭರಿಸಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ?

+ ಶ್ರೀ ಎನ್.ರಾಜೇಂದ್ರನ್ (ಕೆ.ಜಿ.ಎಫ್): ಸನ್ಮಾನ್ಯ ಅಧ್ಯಕ್ಷರೆ, ಬಹಳ ದಿವಸಗಳಿಂದ ನಮ್ಮ ಜೊತೆಯಲ್ಲಿದ್ದಂತಹ ಗಣಿ ಮತ್ತು ಭೂ ವಿಜ್ಞಾನ ಸಚಿವರಾಗಿದ್ದಂತಹ ಶ್ರೀ ಎಸ್.ಡಿ.ಜಯರಾಂರವರು, ತೀರಿ ಹೋಗಿದ್ದಾರೆ. ಅವರು ಇವತ್ತಿನ ದಿವಸ ನಮ್ಮ ಜೊತೆಯಲ್ಲಿ ಇಲ್ಲ. ಯಾವಾಗಲೂ ಸಹ ನಾನು ಅವರನ್ನು ನೋಡಿದ ತಕ್ಷಣ ಅವರಿಗೆ, ಸ್ವಾಮಿ ನೀವು ನಮ್ಮ ಊರಿಗೆ ಬನ್ನಿ, ತಾವು ಗಣಿ ಮತ್ತು ಭೂ ವಿಜ್ಞಾನ

ಮಂತ್ರಿಗಳಾಗಿದ್ದೀರಿ ನಮ್ಮ ಊರಿನಲ್ಲಿರುವ ಚಿನ್ನದ ಗಣಿಯನ್ನು ಬಂದು ನೋಡಿ ಎಂದು ಹೇಳುತ್ತಿದ್ದೆ. ಆದರೆ ಅವರು ಯಾವಾಗಲೂ ಸಹ ನಾನು ಬರುತ್ತೇನೆ, ಬರುತ್ತೇನೆಂದು ಹೇಳುತ್ತಿದ್ದರು, ಒಂದು ದಿವಸವೂ ಸಹ ಹೋಗುತ್ತೇನೆಂದು ಹೇಳಿರಲಿಲ್ಲ. ಆದರೆ ಇವತ್ತು ಬೆಳಿಗ್ಗೆ ಬೆಂಗಳೂರಿಗೆ ಬಂದ ತಕ್ಷಣ ಅವರು ತೀರಿ ಹೋದರು ಎಂದು ಹೇಳಿದ ತಕ್ಷಣ ನಿಜವಾಗಿಯೂ ಸಹ ನೋವಾಯಿತು. ಅವರಿಂದ ಒಂದು ಪಾಠ ಏನು ನಾವು ತಿಳಿದುಕೊಳ್ಳಬೇಕು ಎಂದರೆ ಯಾವಾಗಲೂ ನಾವು, ನಾನು-ನಾನು ಎಂದು ಹೇಳಿಕೊಳ್ಳುತ್ತೇವೆ. ಆದರೆ ದೇವರು ನಮಗಿಂತಲೂ ಮುಂದೆ ಇದ್ದಾನೆ ಎಂದು ನಾವು ಡಿಸೈಡ್ ಮಾಡುವುದಿಲ್ಲ. ನಾನು ಡಿಸೈಡ್ ಮಾಡುವುದು, ಡೆತ್ ಯಾವಾಗಲೂ ಸಹ ನಮ್ಮ ಜೊತೆಯಲ್ಲಿಯೇ ಇರುವುದು; ನಾವು ಅದನ್ನು ತಿಳಿದುಕೊಳ್ಳಬೇಕು ಇವತ್ತಿನ ದಿವಸ ಶ್ರೀ ಎಸ್. ಡಿ. ಜಯರಾಂರವರು ಇಲ್ಲ. ಅವರ ಆತ್ಮಕ್ಕೆ ಶಾಂತಿ ದೊರಕಲಿ, ಮತ್ತು ಅವರ ಕುಟುಂಬ ವರ್ಗದವರಿಗೆ ದುಃಖವನ್ನು ಭರಿಸತಕ್ಕಂತಹ ಶಕ್ತಿಯನ್ನು ಭಗವಂತ ಕೊಡಲಿ ಎಂದು ಬೇಡಿಕೊಳ್ಳುತ್ತೇನೆ. ಇದು ಎಲ್ಲರಿಗೂ ಒಂದು ಪಾಠ ಏನೆಂದರೆ "Death is always with us." ಇವತ್ತು ಇರುವವರು ನಾಳೆ ಇರುವುದಿಲ್ಲ, ನಾಳೆಯ ದಿವಸ ಇರುವವರು ನಾಡಿದ್ದು ಇರುವುದಿಲ್ಲ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಜನರು ಸತ್ತು ಹೋದ ಮೇಲೆ ನಮ್ಮ ಜೊತೆಯಲ್ಲಿ ಇರುವುದಿಲ್ಲವೆಂದು ತಿಳಿದುಕೊಳ್ಳಬಾರದು; ಒಳ್ಳೆಯವರು ಯಾವಾಗಲೂ ಸಹ ನಮ್ಮ ಜೊತೆಯಲ್ಲಿಯೇ ಇರಬೇಕು, ಅವರು ಮಾಡಿರುವಂತಹ ಒಳ್ಳೆಯ ಕೆಲಸ ಯಾವಾಗಲೂ ಸಹ ನಮ್ಮ ಮನಸ್ಸಿನಲ್ಲಿರಬೇಕು. ಸುಮ್ಮನೆ ಪ್ರಾಣ ಇದೆ ಎಂದು ನಮ್ಮ ಜೊತೆಯಲ್ಲಿದ್ದರು ಎನ್ನುವುದಕ್ಕಿಂತಲೂ ಅವರು ಮಾಡಿರುವಂತಹ ಒಳ್ಳೆಯ ಕೆಲಸಗಳು ನಮ್ಮ ಜೊತೆಯಲ್ಲಿವೆ ಎನ್ನುವುದನ್ನು ಶ್ರೀ ಎಸ್. ಡಿ. ಜಯರಾಂರವರು ಒಂದು ಪಾಠದ ರೂಪದಲ್ಲಿ ನಮಗೆ ತೋರಿಸಿದ್ದಾರೆ. ನನಗೆ ಈ ಸಂತಾಪ ಸೂಚಕ ನಿರ್ಣಯ ಮೇಲೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳು. ಮೃತರಾದ 11 ಜನರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ನಮ್ಮ ಪಕ್ಷದ ಪರವಾಗಿ ಭಗವಂತನಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಎಲ್ಲಾ ಮೃತರ ಗೌರವಾರ್ಥವಾಗಿ ಎಲ್ಲಾ ಮಾನ್ಯ ಸದಸ್ಯರುಗಳು ಒಂದು ನಿಮಿಷ ಕಾಲ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಎಲ್ಲಾ ಮಾನ್ಯ ಸದಸ್ಯರುಗಳು ಮೃತರ ಗೌರವಾರ್ಥವಾಗಿ ಒಂದು ನಿಮಿಷ ಕಾಲ ಎದ್ದು ನಿಂತು ಮೌನವನ್ನು ಆಚರಿಸಿದರು)

2) ಪ್ರಸ್ತಾವ: ''ಈ ಸದನವು ಶ್ರೀ ಜೆ. ಹೆಚ್. ಪಟೇಲ್ ಅವರ ನೇತೃತ್ವದ ಸಚಿವ ಸಂಪುಟದಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತದೆ.''

ಅಧ್ಯಕ್ಷರು: ಮಾನ್ಯ ಮುಖ್ಯ ಮಂತ್ರಿಗಳು ಈಗ ಪ್ರಸ್ತಾವವನ್ನು ಮಂಡಿಸಬೇಕು.